ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಉಪಾಧ್ಯಕ್ಷರೇ, ನಾನು ಬೆಳಗಾವಿ ಮಹಾನಗರ ಪಾಲಿಕೆಯ ಬಗ್ಗೆ ಪ್ರಸ್ತಾಪ ಮಾಡಿದೆ. ಮತ್ತು ಮರಾಠಿ ಧ್ವಜದ ಬಗ್ಗೆ ಹಾಗೂ ಅಲ್ಲಿ ವಿಭಾಗ–ವಿಭಾಗಗಳನ್ನು ಬದಲಾವಣೆ ಮಾಡುವ ಬಗ್ಗೆ ಪ್ರಸ್ತಾಪ ಮಾಡಿದೆ. ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡಲಿಲ್ಲ. ಇದೊಂದು ಕೆಟ್ಟ ಮಸೂದೆ, ವಿಕೃತ ಮಸೂದೆ, ಆದ್ದರಿಂದ ಈ ಮಸೂದೆಯನ್ನು ವಿರೋಧಿಸಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

(ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು.)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ವೀರಪ್ಪಮೊಯಿಲಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಬಂದರು, ಮಿನಿಸುಗಾರಿಕೆ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳ ಪರವಾಗಿ).—೧೯೯೦ರ ಕರ್ನಾಟಕ ಮಹಾನಗರ ಪಾಲಿಕೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು.—ಪ್ರಸ್ತಾವ ಏನೆಂದರೆ, ''೧೯೯೦ನೇ ಸಾಲಿನ ಕರ್ನಾಟಕ ಮಹಾನಗರ ಪಾಲಿಕೆಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಚರ್ಚೆ

(ಮುಂದುವರೆದುದು)

† ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯಪಾಲರು ರಾಜ್ಯ ವಿಧಾನ ಮಂಡಲದಲ್ಲಿ, ಮಾಡಿದಂಥ ಭಾಷಣಕ್ಕೆ ವಂದನಾರ್ಪಣೆ ಮಾಡತಕ್ಕಂಥ ಸಂದರ್ಭದಲ್ಲಿ ನನ್ನ ಅನಿಸಿಕೆಗಳನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಮೊನ್ನೆ ಮಾಡಿದಂಥ ನನ್ನ ಭಾಷಣವನ್ನು ಮುಂದುವರೆಸುತ್ತಾ, ಈಗಾಗಲೇ ರಾಜ್ಯಪಾಲರು ತಮ್ಮ ಭಾಷಣದಲ್ಲಿ ''ಸರ್ಕಾರಿ ಜಮೀನುಗಳ ಅನಧಿಕೃತ ಸ್ವಾಧೀನಾನುಭವವನ್ನು ಸಕ್ರಮಗೊಳಿಸಲು ನನ್ನ ಸರ್ಕಾರವು ತತ್ವಶಃ ಒಂದು ಪುಜ್ಞಾಪೂರ್ವಕ ನಿರ್ಣಯವನ್ನು ತೆಗೆದುಕೊಂಡಿದೆ'' ಎಂದು ತಿಳಿಸಿದ್ದಾರೆ. ಈ ರಾಜ್ಯದ ರೈತನ ಒಹು ದಿನಗಳ ಬೇಡಿಕೆಗಳಲ್ಲಿ ಒಂದಾದ ಅಕ್ರಮಣ ಭೂಮಿಯನ್ನು ಒತ್ತುವರಿ ಭೂಮಿಯನ್ನು ಅಥವಾ ಬಗರ್‌ಹುಕುಂ ಸಾಗುವಳಿಯನ್ನು ಸಕ್ರಮಗೊಳಿಸುವಂಥದ್ದು. ಸುಮಾರು ೧೯೭೯ರ ಪೂರ್ವದಲ್ಲಿ ರಾಜ್ಯದಲ್ಲಿ ಯಾರು ಅಕ್ರಮಣ ಭೂಮಿಯನ್ನು, ಸರ್ಕಾರದ ಭೂಮಿಯನ್ನು ಒತ್ತುವರಿ ಮಾಡಿಕೊಂಡು ಅದನ್ನು ಕೃಷಿಗೆ ಉಪಯೋಗಿಸುತ್ತಿದ್ದರು, ಆ ಭೂಮಿಯನ್ನು ಸಕ್ರಮಗೊಳಿಸುವಂಥ ವ್ಯವಸ್ಥೆ ಇತ್ತು. ಅದರ ನಂತರ ಅಧಿಕಾರಕ್ಕೆ ಬಂದಂಥ ಜನತಾ ಪಕ್ಷವಾಗಲಿ ಅಥವಾ ಜನತಾ ದಳದ ಸರ್ಕಾರವಾಗಲಿ ಈ ಒಂದು ಅಕ್ರಮಣ ಭೂಮಿಯನ್ನು ಸಕ್ರಮಗೊಳಿಸತಕ್ಕಂಥ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಲಿಲ್ಲ. ಈ ಸಂದರ್ಭದಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದ ವಿಚಾರ ಏಂದರೆ, ಸುಮಾರು ಆರು ವರ್ಷಗಳಿಂದ ಈ ಅಕ್ರಮ ಭೂಮಿಯನ್ನು ಸಕ್ರಮಗೊಳಿಸುತ್ತೇವೆ ಎನ್ನುವಂಥ ಆಶ್ವಾಸನೆಯನ್ನು ಹಿಂದಿನ ಸರ್ಕಾರ ಕೊಟ್ಟಿತ್ತು.

ಆದರೆ ಈ ಅಕ್ರಮ ಭೂಮಿಯನ್ನು ಸಕ್ರಮಗೊಳಿಸುವಂತಹ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಿಲ್ಲ. ಸರ್ಕಾರಕೊಟ್ಟಿರತಕ್ಕ ಅಂಕಿ ಅಂಶಗಳ ಪ್ರಕಾರ ಎಷ್ಟುಜನ ರೈತರು ಭೂಮಿಯನ್ನು ಆಕ್ರಮಣ ಮಾಡಿಕೊಂಡಿದ್ದಾರೆ ಎಂಬ ವಿಚಾರಕ್ಕೆ ಹೋದಾಗ ಕೇವಲ ಬೆರಳೆಣಿಕೆಯಷ್ಟು ಜನ ಮಾತ್ರ ಆಕ್ರಮಣ ಮಾಡಿಕೊಂಡಿದ್ದಾರೆ ಎನ್ನುವಂಥ ವಿಚಾರ ನಾವು ಗ್ರಾಮ ಪಂಚಾಯಿತ್ ಮಟ್ಟದಲ್ಲಿ ಹೋದಾಗ ಕಂಡುಬರುತ್ತದೆ. ಕಳೆದ ವಿಧಾನ ಸಭೆ ಅಧಿವೇಶನದ ಸಂದರ್ಭದಲ್ಲಿ ನಾನು ನನ್ನ ಕ್ಷೇತ್ರದ ಪ್ರತಿ ಗ್ರಾಮದಲ್ಲಿ ಎಷ್ಟುಜನ ಅಕ್ರಮಣದಾರರು ಇದ್ದಾರೆ ಎಂದು ವಿಚಾರಿಸಿದಾಗ ಮತ್ತು ವಿಚಾರಿಸಿದಾಗ ಗ್ರಾಮದ ರಸ್ತೆ ಬದಿಯಲ್ಲಿ ರೈತರು ಯಾರು ಇದ್ದಾರೆ ಅವರ ಅಕ್ರಮಣವನ್ನು ಮಾತ್ರ ದಾಖಲು ಮಾಡಿಕೊಂಡಿದ್ದಾರೆಯೇ ಹೊರತು ನಿಜವಾಗಿ ಯಾರು ಗ್ರಾಮಾಂತರ ಪ್ರದೇಶದಲ್ಲಿದ್ದಾರೆ ಮತ್ತು ಯಾರು ಒಳನಾಡಿನಲ್ಲಿದ್ದಾರೆ ಅಂತಹವರ ಅಕ್ರಮಣವನ್ನು ದಾಖಲೆ ಮಾಡತಕ್ಕ ಕೆಲಸವನ್ನು ಮಾಡಿಲ್ಲ. ಅದೂ ಅಲ್ಲದೆ ರೈತರು ಮುಖ್ಯವಾಗಿ ಹೊಂದಿಕೊಂಡಿರತಕ್ಕ ಅವರ ಕುಂಕಿ ಹಕ್ಕು ಅಂದರೆ ಅವರ ಭೂಮಿಗೆ ಹೊಂದಿಕೊಂಡಿರತಕ್ಕ ಸ್ಥಳದಲ್ಲಿ ಕೃಷಿ ಕೆಲಸ ಮಾಡತಕ್ಕಂಥ ಕುಂಕಿ ಹಕ್ಕನ್ನು ಖಾಯಂ ಮಾಡಬೇಕೆಂಬ ವಿಚಾರ.